

ಬೇರೆ ದಿಕ್ಕಿನಲ್ಲಿ ಸುತ್ತುತ್ತಿದ್ದ ಜೀಪು ಡ್ರೈವರ್‌ಗಳಿಗೆ ಆಗಾಗ ಫೋನಿನ ಮೂಲಕ ಮಾಹಿತಿ ಕೇಳಿ ಪೀಡಿಸುತ್ತಿದ್ದ. ಟಿಪ್ಸು ಆಸೆಗೆ ಮುಗಿಬೀಳುವ ಕೆಲವು ಜೀಪು ಡ್ರೈವರ್‌ಗಳೂ ಇಂಥವರ ಕಾಲಾಳಿನಂತೆ ಆಜ್ಞೆ ಸ್ವೀಕರಿಸುತ್ತಾರೆ. ಅಪರೂಪಕ್ಕೆ ಸಫಾರಿಗೆ ಹೋಗುವ ನಮ್ಮಂತಹ ಮಾಮೂಲಿ ಜನರಿಗೆ ಇಂತಲ್ಲಿ ಬಿಡಿಗಾಸಿನ ಮರ್ಯಾದೆಯೂ ಇರುವುದಿಲ್ಲ.

ಅಸಲಿಗೆ ಇಂಥ ಸಣ್ಣಪುಟ್ಟ ಗಲಾಟೆ, ಜಟಾಪಟಿ, ಸಫಾರಿಗಳಲ್ಲಿ ಮಾಮೂಲಾಗಿ ಇದ್ದೇ ಇರುತ್ತದೆ. ಆದರೆ ಇವತ್ತು ಈ ಹುಡುಗನ ತೋರಿದ ವರ್ತನೆ ಕೊಂಚ ಅತಿಯೇ ಆಗಿತ್ತು. ಕಾಡು ಕೊಂಡವನಂತೆ ಅವನು ಕುಣಿದಾಡುತ್ತಿದ್ದ. ನಂತರ ಈತನ ಪೂರ್ವಾಪರ ವಿಚಾರಿಸಿದಾಗ ಇವನು ದೊಡ್ಡ ತಲೆನೋವಿನ ಗಿರಾಕಿಯೆಂದೂ, ಇವನು ಹತ್ತಿದ ಜೀಪು ನಾವು ಯಾರೂ ಸುತಾರಾಂ ಆಯ್ಕೆ ಮಾಡಿಕೊಳ್ಳುವುದಿಲ್ಲವೆಂದೂ ಅನೇಕ ಗೆಳೆಯರು ವರದಿ ಕೊಟ್ಟರು. ಈ ದಿನ ಇವನ ಮಂಗಾಟದಿಂದ ನಮಗೆ ಸಿಗಲಿದ್ದ ಎರಡು ಹುಲಿಗಳ ಜಾಡು ತಪ್ಪಿ ಹೋದ ಬೇಸರ ಹಾಗೇ ಉಳಿಯಿತು.

ವ್ಯಾಘ್ರದ ದಿನನಿತ್ಯದ ಓಡಾಟ ಗಮನಿಸುವ ಅನೇಕ ಜೀಪ್ ಡ್ರೈವರ್‌ಗಳು ಹುಲಿಯ ಜಾಡನ್ನು ನಿಖರವಾಗಿ ಊಹೆ ಮಾಡುತ್ತಾರೆ. ಅವರಿಗೆ ಕಾಡಿನ ಸೂಕ್ಷ್ಮಗಳು ಗೊತ್ತು. ಆದರೆ, ಕಾಯಮ್ಮಾಗಿ ಕಾಡಿನ ಸಫಾರಿ ಬುಡದಲ್ಲೇ ಠಿಕಾಣಿ ಹೂಡಿದ ಕೆಲ ಚಟಭಯಂಕರರು ಸಮಸ್ಯೆಗೆ ಕಾರಣರು. ಈ ಹುಲಿ ನೆಂಟರು ಸಿಕ್ಕಾಪಟ್ಟೆ ಗೊತ್ತಿರುವ ಪಂಡಿತರ ರೀತಿ ತುತ್ತೂರಿ ಊದುತ್ತಾರೆ. ಸಫಾರಿ ಮುಗಿದ ಮೇಲೆ ನಡೆಯುವ ಇವರ ಗುಂಪು ಚರ್ಚೆಗಳನ್ನು ಗಮನಿಸಬೇಕು. ಇವರ ಲಂಗುಲಗಾಮಿಲ್ಲದ ವಿಚಿತ್ರ ಮಾಹಿತಿಗಳು ದಂಗುಬಡಿಸುತ್ತವೆ. ಹುಲಿಯ ಜೊತೆಗೆ ಆಡಿ, ಉಂಡು, ಬೆಳೆದು, ನಲಿದವರಂತೆ ವರ್ಣಿಸುವುದು ಕೇಳಲು ತಮಾಷೆ ಎನಿಸುತ್ತದೆ. ಹುಲಿಗಳನ್ನು ದಿನ ನಿತ್ಯವೂ ತಪ್ಪದೇ ನೋಡಿಯೇ ಉಸಿರಾಡಬೇಕೆಂದು ತೀರ್ಮಾನಿಸಿರುವ ದೊಡ್ಡ ಹುಚ್ಚರ ಗುಂಪು ಇದೇ ಎಂದರೆ ನಿಮಗೆ ವಿಚಿತ್ರ ಎನಿಸಬಹುದು. ಹುಲಿಗಿಂತ ಹೆಚ್ಚು ಕುತೂಹಲ ಕೆರಳಿಸುವ ಇಂತಹ ಕೆಲವು ಮಹಾಮಹಿಮರನ್ನು ನನ್ನ ಕಾಡಿನ ನಡಿಗೆಯಲ್ಲಿ ಕಂಡಿದ್ದೇನೆ. ವ್ಯಾಘ್ರದ ಪಟ ಎಷ್ಟು ತೆಗೆದರೂ ಇವರ